ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 21-25
©*IIMRD*, Mysuru
IIMRD JOURNALS
www.iimrd.com

# ಕನ್ನಡ ಸಾಹಿತ್ಯ ಮತ್ತು ಆಧುನಿಕ ಕೃತಕ ಬುದ್ಧಿಮತ್ತೆ

**ಎಚ್.ಪಿ. ಶ್ರೀನಿವಾಸ್**
ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ್ ಸಾಗರ್ ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ಕುಮಾರಸ್ವಾಮಿ ಬಡಾವಣೆ, ಬೆಂಗಳೂರು

**ಸಾರಾಂಶ: (Abstract)**

*ಈ ಸಂಶೋಧನಾ ಲೇಖನವು ಕನ್ನಡ ಸಾಹಿತ್ಯ ಮತ್ತು ಆಧುನಿಕ ಕೃತಕ ಬುದ್ಧಿಮತ್ತೆ (Artificial Intelligence) ನಡುವಿನ ಪರಸ್ಪರ ಸಂಬಂಧ, ಸಾಧ್ಯತೆಗಳು ಹಾಗೂ ಸವಾಲುಗಳನ್ನು ವಿಶ್ಲೇಷಿಸುತ್ತದೆ. ಕೃತಕ ಬುದ್ಧಿಮತ್ತೆಯ ಬೆಳವಣಿಗೆಯು ಸಾಹಿತ್ಯ ರಚನೆ, ಭಾಷಾಂತರ, ಪಠ್ಯ ವಿಶ್ಲೇಷಣೆ ಹಾಗೂ ಡಿಜಿಟಲ್ ಸಂರಕ್ಷಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ. ಕನ್ನಡ ಸಾಹಿತ್ಯದ ಸೃಜನಶೀಲತೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಂಡು ತಂತ್ರಜ್ಞಾನದ ಬಳಕೆಯನ್ನು ಹೇಗೆ ಸಮತೋಲನಗೊಳಿಸಬಹುದು ಎಂಬುದನ್ನು ಈ ಅಧ್ಯಯನ ಚರ್ಚಿಸುತ್ತದೆ. AI ಆಧಾರಿತ ಸಾಧನಗಳು ಸಂಶೋಧಕರು, ಲೇಖಕರು ಹಾಗೂ ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳನ್ನು ಒದಗಿಸುತ್ತವೆ. ಆದರೆ ಮಾನವ ಸೃಜನಶೀಲತೆ, ನೈತಿಕತೆ ಮತ್ತು ಮೂಲತೆಯ ಪ್ರಶ್ನೆಗಳು ಪ್ರಮುಖ ಸವಾಲುಗಳಾಗಿ ಉಳಿದಿವೆ. ಕನ್ನಡ ಸಾಹಿತ್ಯದ ಭವಿಷ್ಯದ ಬೆಳವಣಿಗೆಯಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರವನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ಈ ಲೇಖನ ಪರಿಶೀಲಿಸುತ್ತದೆ. ಸಾಹಿತ್ಯ ಮತ್ತು ತಂತ್ರಜ್ಞಾನದ ಸಮನ್ವಯವು ಕನ್ನಡ ಭಾಷೆಯ ಅಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಬಲ್ಲದು ಎಂಬುದನ್ನು ಅಧ್ಯಯನವು ಪ್ರತಿಪಾದಿಸುತ್ತದೆ.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಕೃತಕ ಬುದ್ಧಿಮತ್ತೆ (Artificial Intelligence), ಡಿಜಿಟಲ್ ಸಾಹಿತ್ಯ, ಭಾಷಾ ತಂತ್ರಜ್ಞಾನ.*

## ಪೀಠಿಕೆ

ಆಧುನಿಕ ವೈಜ್ಞಾನಿಕ ಪ್ರಪಂಚ 21ನೇ ಶತಮಾನದಲ್ಲಿ ಯಶಸ್ಸಿನ ಉತ್ತುಂಗವನ್ನು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಧಿಸಿದೆ ಎಂದರೆ ತಪ್ಪಾಗಲಾರದು. ಇಂದು ಮನುಷ್ಯನ ಎಲ್ಲಾ ಹಂತದಲ್ಲಿ ಜ್ಞಾನೋದಯದಿಂದ ಹಿಡಿದು ಬದುಕಿನ ವಿವಿಧ ಆಯಾಮಗಳಲ್ಲಿ ವೈಜ್ಞಾನಿಕ ಕೃತಕ ಬುದ್ಧಿಮತ್ತೆ ರಾರಾಜಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಕೃತಕ ಬುದ್ಧಿ ಎನ್ನುವಂತದ್ದು ಹೆಸರೇ ಸೂಚಿಸುವಂತೆ ಇಂದು ಕೃತಕತೆಯನ್ನು ಹೇಳಿದರೆ ಸಾಹಿತ್ಯ ಎನ್ನುವುದು ಸ್ವಂತಿಕೆಯನ್ನು ಪ್ರಜ್ಞೆಯನ್ನು ಕುರಿತು ತಿಳಿಸುತ್ತದೆ. ಬಹುಶಹ ಈ ಜಗತ್ತಿನಲ್ಲಿ ಮೂಲ ಮನುಷ್ಯನ ಭಾಷೆಯ ಜೊತೆಗೆ ಸಾಹಿತ್ಯದಲ್ಲೂ ಕೂಡ ಪ್ರಾರಂಭವಾಗಿದೆ

*Please cite this article as:* ಶ್ರೀನಿವಾಸ್, ಎಚ್.ಪಿ. (2026). ಕನ್ನಡ ಸಾಹಿತ್ಯ ಮತ್ತು ಆಧುನಿಕ ಕೃತಕ ಬುದ್ಧಿಮತ್ತೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 21–25

ಎನ್ನುವಂತಹ ಚರ್ಚೆ ಸಾಕಷ್ಟು ನುಡಿಯುತ್ತಲಿದ್ದರೂ ಇದರ ಅರ್ಥ ಏನೆಂದರೆ ಮನುಷ್ಯನ ವಿಕಾಸದಲ್ಲಿ ಭಿನ್ನವಾದಂತದ್ದನ್ನು ಸಾಧಿಸಿದ್ದಾನೆ ಎಂದರ್ಥ. ಅಂದರೆ ಅತ್ಯುನ್ನತವಾದ ಭಾಷೆ ಎನ್ನುವಂತಹದ್ದನ್ನು ಕಂಡುಕೊಂಡಿದ್ದಾನೆ. ಈ ಭಾಷೆಯ ಮೂಲಕ ನಾವು ನಾಗರಿಕತೆಯನ್ನು ತುತ್ತ ತುದಿಗೆ ತೆಗೆದುಕೊಂಡು ಹೋಗಿದ್ದೇವೆ ಎಂಬುದು ಕೂಡ ಅಷ್ಟೇ ಗಮನಾರ್ಹವಾದುದು. ಹೀಗಾಗಿಯೇ ವಿಜ್ಞಾನ ಚರಿತ್ರೆ ಎಂಬ ಎಲ್ಲ ಮಾತನಾಡುತ್ತಿದ್ದೇವೆ. ಎಂದರೆ ಇದರ ಪೂರ್ವದಲ್ಲಿಯೇ ಎಲ್ಲವನ್ನು ಮೂಲ ಆಕಾರವಾಗಿ ಇಟ್ಟುಕೊಂಡಿದ್ದೇವೆ ಎಂಬುದನ್ನು ಗಮನಿಸಬೇಕು. ಸಾಹಿತ್ಯ ಎಂದರೇನು ಎಂಬುದನ್ನು ಕುರಿತು ಜಗತ್ತಿನಾದ್ಯಂತ ಚರ್ಚೆಗಳು ನಡೆಯುತ್ತಿವೆ ವಿದ್ವಾಂಸರ ಅಭಿಪ್ರಾಯಗಳ ಮೇಲೆ ಸಾಹಿತ್ಯ ಎಂದರೆ ಬದುಕು ಎಂಬುದನ್ನು ಗ್ರಹಿಸಬಹುದಾಗಿದೆ.' literature is nothing but mirror. Mirror of life. ಎಂದು ದೊಡ್ಡ ಕವಿಗಳು ಹೇಳುತ್ತಾರೆ .

ಇದರ ಅರ್ಥ ಬದುಕು ಬಿಟ್ಟು ಬೇರೆ ಏನನ್ನು ಸಾಹಿತ್ಯ ನೋಡುವುದಿಲ್ಲ ಸಾಹಿತ್ಯ ಮದುವೆ ದಿನ ಆಚೆಗೆ ಏನನ್ನು ತೋರಿಸುವುದಿಲ್ಲ. ಹಾಗಾಗಿ ನಾವುಗಳು ಏನನ್ನು ಹೇಳಿದರು ಬದುಕಿನ ಒಳಗಡೆಗೆ ಸಾಹಿತ್ಯ ರೂಪಗೊಳ್ಳುತ್ತದೆ ನಮ್ಮ ಭಾರತೀಯ ಸಂದರ್ಭದಲ್ಲಿರುವ ಉದಾಹರಣೆಗಳನ್ನು ತೆಗೆದುಕೊಳ್ಳೋಣ. ದೇಶದ ಎರಡು ಮಹಾನ್ ಕಾವ್ಯಗಳು ಏನನ್ನು ಹೇಳುತ್ತಿವೆ? ಇವತ್ತಿಗೂ ನಮ್ಮ ಬದುಕನ್ನು ನಾವು ಅಲ್ಲಿಂದಲೇ ತೆಗೆದುಕೊಳ್ಳುತ್ತೇವೆ ಅಲ್ಲ ಅವುಗಳ ಅರ್ಥಗಳೇನು ಎಂದರೆ ಬದುಕು ಎಂಬುದನ್ನು ಕಾವ್ಯರೂಪಿಸಿದೆ ಯಾಕೆ ನಮಗೆ ಆದರ್ಶ ರಾಮ. ಯಾಕೆ ನಮಗೆ ಆದರ್ಶ ಕೃಷ್ಣ ನೀವು ಎಲ್ಲಿಂದ ಬಂದವು ಇವು ಚರಿತ್ರೆಯಿಂದ ಬರಲ್ಲ ಅಥವಾ ವಿಜ್ಞಾನದಿಂದ ಬರಲ್ಲ ಇದು ಸಾಹಿತ್ಯದಿಂದಲೇ ಬಂತು ಇದರ ಮೂಲಕ ಏನನ್ನು ಹೇಳಲಾಗುತ್ತಿದೆ. ರಾಮಾಯಣದ ಮೂಲಕ ಒಂದು ಅವಿಭಕ್ತ ಕುಟುಂಬವನ್ನು ಮಹಾಭಾರತದ ಮೂಲಕ ಕುಟುಂಬ ಸೀಳಿಕೊಳ್ಳುವ ವ್ಯವಸ್ಥೆಯನ್ನು ಹೀಗೆ ಎರಡನ್ನು ಕುರಿತು ಮಾತನಾಡುತ್ತಿದ್ದರು. ಇದು ಎಲ್ಲಿಂದ ಬಂತು ಹೀಗೆ ಇದು ಸಾಹಿತ್ಯದ ಸ್ವರೂಪವಾಗಿ ನಮ್ಮ ಕಣ್ಣೆದುರಿಗೆ ಕಾಣಿಸಿಕೊಳ್ಳುತ್ತದೆ. ಎಂಬುದನ್ನು ನಾವಿಲ್ಲಿ ಪೂರಕವಾಗಿ ನೆನೆಯಬಹುದು. ಹಾಗಾಗಿ ಈ ಜಗತ್ತಿನ ಒಳಗಡೆ ರವಿ ಕಾಣದ್ದನ್ನು ಕವಿ ಕಂಡ ಎಂಬಂತಹ ಮಾತುಗಳಿವೆ. ಅಂದರೆ ಅರ್ಥವೇನು? ರವಿ ಕಾಣದ್ದನ್ನು ಕವಿ ಕಂಡ ಎನ್ನುವಾಗ ಜಗತ್ತಿನಲ್ಲಿ ಎಲ್ಲಾ ಸತ್ಯಗಳು ಎದುರಾಗ ಬಹುದಾದದ್ದನ್ನು ಒಂದು ವಿಶಿಷ್ಟ ಶಕ್ತಿಯಾಗಿ ಕವಿ ಪಡೆದುಕೊಂಡಿದ್ದಾನೆ ಎಂದರ್ಥ. ಪ್ರಭು ಶಂಕರರು ಹೇಳುವಂತೆ " ಕವಿಯ ಹೃದಯ ಹದವಾಗಿ ಶ್ರುತಿ ಮಾಡಿಟ್ಟ ವೀಣೆಯಂತೆ ಅದು ಲೋಕದ ಆಗುಹೋಗುಗಳನ್ನೆಲ್ಲ ತಪ್ಪದೇ ಪ್ರತಿ ಸ್ಪಂದಿಸುತ್ತದೆ ಎನ್ನುತ್ತಾರೆ " ಕವಿ ಎಲ್ಲವನ್ನೂ ಕಂಡು ತನ್ನ ಸಾಹಿತ್ಯದಲ್ಲಿ ಅದನ್ನು ತರುತ್ತಾನೆ.

ವಿಶಿಷ್ಟ ಶಕ್ತಿಯಾಗಿ ಕವಿ ಕಾಣಿಸಿಕೊಳ್ಳುತ್ತಾನೆ ಎಲ್ಲರೂ ಕವಿಯಾಗಲು ಸಾಧ್ಯವಿಲ್ಲ ಅನುಭವವನ್ನು ಲೋಕಜ್ಞಾನವನ್ನು ಎದುರು ಬದುರಾಗಿ ಮುಖಾಮುಖಿಯಾಗಿ ಅನುಸಂಧಾನ ಮಾಡಿದ ವಿಶಿಷ್ಟ ಕವಿ ಪರಂಪರೆಯನ್ನು ನಮ್ಮ ನಡುವೆ ಕಾಣುತ್ತೇವೆ. ಕಾಳಿದಾಸ ನಂತಹ ಕವಿಯನ್ನು ಸೃಷ್ಟಿಸಿದ ಜಗನ್ಮಾತೆಯಂತಹ ಕಲ್ಪನೆ ಅಂತಹ ಸಾಹಿತ್ಯವನ್ನು ರೂಪಿಸಿಕೊಳ್ಳುತ್ತೇವೆ. ಇದು ಸಾಧ್ಯವಾಗುವುದು ಕವಿಯ ಕ್ರಿಯಾಶೀಲತೆಯ ಗುಣದಿಂದ ಇಂತಹ ಸಾಹಿತ್ಯ ರಚನೆಯ ಪರಿಕಲ್ಪನೆಯನ್ನು ನಾವು ಕೃತಕ ಬುದ್ಧಿಮತ್ತೆಯೊಂದಿಗೆ

ಸಮೀಕರಿಸಿದಾಗ ನಮಗೆ ಸೃಜನಶೀಲ ಸಾಹಿತ್ಯ ದೊರಕುವುದು ಸಾಧ್ಯವಿಲ್ಲ. ಅಂದರೆ ಜ್ಞಾನ ಮತ್ತು ಸಾಹಿತ್ಯ ಎನ್ನುವಂತಹದ್ದು ಬಹುದೊಡ್ಡ ಅರಿವು ಹಾಗಾಗಿ ಸಾವಿತ್ ಸಾಹಿತ್ಯ ಎನ್ನುವಂತಹದ್ದು ಬಹಳ ಸ್ಪಷ್ಟವಾಗಿ ಗುರುತಿಸುವುದೇನೆಂದರೆ ಮನುಷ್ಯನ ಕ್ರಿಯಾಶೀಲತೆಯ ಉನ್ನತವಾದ ಅಂತಹ ಅಂತವೆಲ್ಲಬಹುದು. ಸಾಹಿತ್ಯ ಅನ್ನುವಂತಹದ್ದು ಎಲ್ಲರಿಂದಲೂ ಸೃಷ್ಟಿಯಾಗುವಂತಹದ್ದಲ್ಲ ಹಾಗಾಗಿ ಅದಕ್ಕ ಒಬ್ಬ ಕವಿ ಬರುತ್ತಾನೆ.

ಅವನು ವಿಶೇಷವಾಗಿರುತ್ತಾನೆ ಹರಿಶ್ಚಂದ್ರನನ್ನು ಕುಮಾರವ್ಯಾಸನನ್ನು ಕುರಿತು ಹಲವು ದಂತಕಥೆಗಳಿವೆ. ಕುವೆಂಪು ಶ್ರೀ ರಾಮಾಯಣ ದರ್ಶನಂನನ್ನು ಬರೆಯುವಾಗ ಈ ತರಹದ ಕಥೆಗಳನ್ನು ಪ್ರಸ್ತಾಪಿಸಿದ್ದಾರೆ. ಅಂದರೆ ಇವೆಲ್ಲ ಏನು ಹಾಗಾದರೆ ಸಾಹಿತ್ಯ ಎನ್ನುವಂತಹದ್ದು ಸಾಮಾನ್ಯವಾದ ಸಂಗತಿಯಲ್ಲ ತುಂಬಾ ಸೃಜನಶೀಲವಾದದ್ದು. ಹಾಗೂ ಕ್ರಿಯಾಶೀಲತೆಯಿಂದ ಕೂಡಿರುವಂತಹದ್ದು. ಸಾಹಿತ್ಯ ಸಂಸ್ಕೃತಿಯನ್ನು ಗಮನಿಸುವುದಾದರೆ ಅದರ ಜೊತೆಗೆ ಇತ್ತೀಚಿನ ಯುಗದಲ್ಲಿ ಈ ಕೃತಕ ಬುದ್ಧಿಮತ್ತೆ ಎನ್ನುವಂತಹದ್ದನ್ನು ನಾವು ಗಮನಿಸಬಹುದು ಕೃತಕ ಬುದ್ಧಿಮತ್ತೆ ಎಂದು ಹೇಳುವಾಗ ವಿಜ್ಞಾನದ ಹೊಸ ಆವಿಷ್ಕಾರವೆಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಈ ಹೊತ್ತಿಗೆ ಎಲ್ಲವನ್ನೂ ಸಾಧಿಸಿಕೊಂಡಿರುವ ನಾವು ನಮಗೆ ಅರಿವಿರದ ರೂಪದಲ್ಲಿ ಇನ್ನೊಂದನ್ನು ಎದುರು ನಿಲ್ಲಿಸಿಕೊಂಡು ನಮ್ಮ ಮಾತು ನಮ್ಮ ಜ್ಞಾನ ನಮ್ಮ ಭಾಷೆ ನಮ್ಮ ನಡವಳಿಕೆ ಕೊನೆಗೆ ನಮ್ಮದೇ ರೂಪಾಂತರಗಳನ್ನು ರೂಪಿಸಿಕೊಂಡು ತಲೆಯನ್ನು ಸಾಧಿಸಿ ಕೊಂಡಿದ್ದೇವೆ ಎನ್ನುವ ಹಾಗೆ ಕೃತಕ ಬುದ್ಧಿಮತ್ತೆಯನ್ನು ತರಲಾಗುತ್ತದೆ. ಗಣಕಯಂತ್ರ ಮತ್ತು ಪೂರಕ ತಂತ್ರಜ್ಞಾನ ಹಿಂದಿನ ಜಗತ್ತಿಗೆ ಅನಿವಾರ್ಯವಾಗಿರುವುದನ್ನು ನಾವು ಗಮನಿಸೋಣ.

ಗಣಕಯಂತ್ರ ಎನ್ನುವಂತಹದ್ದು ಅತ್ಯುತ್ತಮ ಸಾಧನ ಎಂದಿದ್ದಾನೆ ಕಂಪ್ಯೂಟರ್ ಯುಗ ಎಂದು ಕರೆದಿದ್ದೇವೆ. ಈ ಒಂದು ಸಾಧನ ರೂಪಿಸುವಂಥವರು ಮನುಷ್ಯರೇ. ನಿಯಂತ್ರಿಸುವವರು ಮನುಷ್ಯರೇ. ಹೀಗಿರುವಾಗ ಸೃಜನಶೀಲವಾದ ಸಾಹಿತ್ಯವನ್ನು ಕೃತಕ ಬುದ್ಧಿಮತ್ತೆಯ ಸಂದರ್ಭದಲ್ಲಿ ಕಲ್ಪಿಸಿಕೊಳ್ಳುವುದೇ ಕಷ್ಟ ಇರೋದನ್ನ ಸೃಷ್ಟಿಸುವುದು ಸರಿ ಆದರೆ ಸಾಹಿತ್ಯ ಎನ್ನುವಂತಹದ್ದು ಸ್ವಯಂ ಸೃಷ್ಟಿ ಆಗಿರುವುದರಿಂದ ಈ ಸಾಹಿತ್ಯವನ್ನು ಕೃತಕ ಬುದ್ಧಿಮತ್ತೆಯಲ್ಲಿ ಹೇಗೆ ಬಳಸಬಹುದು ಹಾಗೂ ನಾವು ಕೃತಕ ಬುದ್ಧಿಮತ್ತೆಯ ಜೊತೆಗೆ ಸಾಹಿತ್ಯವನ್ನು ನೋಡುವಾಗ ಈಗಾಗಲೇ ಆಗಿರುವುದನ್ನು ಮರು ಮುದ್ರಣ ಮಾಡುವುದಕ್ಕೆ ಅಥವಾ ಸಾಹಿತ್ಯವನ್ನು ಅದರ ಬಾಯಲ್ಲಿ ಹೇಳಿಸುವುದಕ್ಕೆ ಇಲ್ಲಿ ಗಮಕ ಸಾಹಿತ್ಯದ ರೀತಿಯಲ್ಲಿ ಹೇಳಿಸುವುದಕ್ಕೆ ಇಂತಹವುಗಳಿಗೆ ಬಳಸಬಹುದೇ ಹೊರತು ಒಂದು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಕಾವ್ಯ ರಚಿಸುವುದಕ್ಕೂ ಅಥವಾ ಕಥೆ ಬರೆಯುವುದಕ್ಕೂ ಸಾಧ್ಯವಿಲ್ಲ. ಒಂದು ಕೃತಕ ಬುದ್ಧಿಮತ್ತೆಯಲ್ಲಿ ಯಾವುದೇ ಸಾಹಿತ್ಯ ಸೃಷ್ಟಿಯಾಗಬೇಕೆಂದರು ಮಾಹಿತಿಯನ್ನು ಒದಗಿಸುವವರು ನಾವೇ ಆಗಿರುತ್ತೇವೆ ಎಂಬುದನ್ನು ಗಮನಾರ್ಹ.

ಸೃಜನಶೀಲತೆ ಎನ್ನುವುದು ಇಲ್ಲಿ ಸಾಧ್ಯವಾಗುವುದಿಲ್ಲ ಕಾವ್ಯ ಮೀಮಾಂಸೆ ಒಳಗಡೆ ಕವಿಗೆ ಕಾವ್ಯ ಸಾಹಿತ್ಯವನ್ನು ರಚಿಸುವುದಕ್ಕೆ ಬೇರೆ ಬೇರೆ ರೀತಿಯ ಅರ್ಹತೆಯನ್ನು ಕಾವ್ಯ ಮೀಮಾಂಸೆಗಾರರು ಹೇಳುತ್ತಾರೆ. ಆದರೆ ಕೃತಕ ಬುದ್ಧಿಮತ್ತೆಗೆ ಇದು ಸಾಧ್ಯವೇ? ನಮ್ಮ ದೇಶದಲ್ಲಿ 300ಕ್ಕೂ ಹೆಚ್ಚು ರಾಮಾಯಣಗಳಿವೆ ಎಂದು ಎ.ಕೆ. ರಾಮಾನುಜನ್ ಅವರು ತಿಳಿಸಿರುತ್ತಾರೆ " ಕಾಲಿಟ್ಟ ಕಡೆಯಲ್ಲೆಲ್ಲಾ ರಾಮಾಯಣಗಳೇ ತುಂಬಿರುವುದರಿಂದ ಆ ಕಾರಣಕ್ಕಾಗಿ ನಾನು ಮಹಾಭಾರತವನ್ನು ಬರೆದಿದ್ದೇನೆ ಎಂದು

ಕುಮಾರವ್ಯಾಸ ಹೇಳುತ್ತಾನೆ. ಹಾಗಿರುವಾಗ ಜನಪದರು ಮತ್ತು ಬುಡಕಟ್ಟು ಸಮುದಾಯದವರಿಂದ ಹಿಡಿದು ನಾಗರಿಕತೆಯಿಂದ ಆಧುನಿಕತೆ ವರೆಗೂ ರಾಮಾಯಣ ಮತ್ತು ಮಹಾಭಾರತಗಳು ಮತ್ತೆ ಮತ್ತೆ ಸೃಷ್ಟಿಯಾಗಿದ್ದು ಹೇಗೆ ಮತ್ತು ಏಕೆ? ಅಂದರೆ ಅವು ಕೃತಕವಲ್ಲ ಪ್ರತಿ ಸಂಸ್ಕೃತಿಯ ಸಂದರ್ಭದಲ್ಲಿ ಜ್ಞಾನದಾರಿಯಾಗಿ ಅವು ತಮ್ಮನ್ನು ತಾವು ಕಟ್ಟಿಕೊಳ್ಳುವ ಪ್ರೀತಿಸಿಕೊಳ್ಳುವ ಕ್ರಮವಾಗಿ ಕಾಣಿಸಿಕೊಳ್ಳುತ್ತವೆ. ಎನ್ನುವಂತಹ ಕಾರಣಕ್ಕಾಗಿ ಕನ್ನಡದ ಒಳಗಡೆಯೇ ನಮ್ಮ ಸಾಕಷ್ಟು ಜನ ಕವಿಗಳನ್ನು ನಾವು ನೋಡಬಹುದು ಯಾಕೆ ಇಷ್ಟು ಜನ ಕವಿಗಳು ಕಾದಂಬರಿಕಾರರು ಇದ್ದಾರೆ, ಯಾಕೆ ಪ್ರತಿಯೊಂದು ಬರಹಗಳು ವಿಭಿನ್ನವಾಗಿರುತ್ತವೆ? ಯಾಕೆ ಇದರ ನೆಲೆಯೊಳಗೆ ಆಲೋಚನಾ ಕ್ರಮಗಳು ವಿಭಿನ್ನವಾಗಿವೆ? ಕತೆ ಕಾದಂಬರಿ ಬದುಕಾಗಿಸಿ ಕೊಂಡಿರುವ ದೃಷ್ಟಿಕೋನಗಳು ನಮ್ಮಲ್ಲಿ ಸೃಷ್ಟಿಯಾಗಿವೆ ಇದನ್ನು ನಾವು ನೋಡುತ್ತಿರುವ ಕ್ರಮದಲ್ಲಿ ವಿನ್ನತೆಗಳಿರುತ್ತವೆ.

ಒಂದು ಕಾದಂಬರಿಯ ತರಹ ಮತ್ತೊಂದು ಕಾದಂಬರಿ ಇರುವುದಿಲ್ಲ ಯಾಕೆ? ಕುವೆಂಪು ಕಾದಂಬರಿ ತರಹ ಕಾರಂತರ ಕಾದಂಬರಿಗಳು ಭಿನ್ನವಾಗಿಯೇ ದಾಖಲಾಗಿರುತ್ತದೆ ಏಕೆ? ಕುವೆಂಪು ಸೂರ್ಯೋದಯವನ್ನು ಕುರಿತು 250ಕ್ಕೂ ಹೆಚ್ಚಿನ ಆಲೋಚನೆಗಳನ್ನು ಪದ್ಯಗಳಲ್ಲಿ ಪ್ರಸ್ತಾಪಿಸುತ್ತಾರೆ. ಅದು ಹೇಗೆ ಸಾಧ್ಯ ಇಂತಹ ಸೃಜನಶೀಲತೆಯ ಕೃತಕ ಬುದ್ಧಿಮತ್ತೆಯೊಳಗೆ ಅಸಾಧ್ಯ ವಾಗಬಲ್ಲದೇಕೆ? ಕೃತಕ ಬುದ್ಧಿ ಮತ್ತೆ ಎನ್ನುವುದು ಒಂದು ವಿಜ್ಞಾನದ ಅವಿಷ್ಕಾರವೇ ಹೊರತು ಸೃಜನಶೀಲ ಪ್ರಕ್ರಿಯೆ ಯಲ್ಲ. ಕೃತಕ ಬುದ್ಧಿಮತ್ತೆಯ ಒಳಗೆ ಈಗಾಗಲೇ ಬಿಟ್ಟು ಹೇಳಿಸಿ ಅದನ್ನು ವಿಮರ್ಶಿಸಿ ದಾಖಲೆ ಮಾಡಬಹುದೇ ಹೊರತು ಒಬ್ಬ ಕುವೆಂಪುವನ್ನು ಬೇಂದ್ರೆಯನ್ನು ತೇಜಸ್ವಿಯನ್ನು ವಾಲ್ಮೀಕಿಯನ್ನು ವ್ಯಾಸರನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯವಿಲ್ಲ.

ಹಾಗಾಗಿ ಆಧುನೀಕರಣದ ಉಪಕರಣವಾದ ಈ ಕೃತಕ ಬುದ್ಧಿಮತ್ತೆಯ ಬಗ್ಗೆ ನಾವು ಎಚ್ಚರವನ್ನು ತಾಳಬೇಕಾಗಿದೆ . ಮನುಷ್ಯ ಸಂಬಂಧಗಳು ಸಂಕೀರ್ಣವಾಗುತ್ತಿರುವ ಈ ಹೊತ್ತಿನಲ್ಲಿ ಇರೋ ಹಾಗೆ ಆರೋಗ್ಯಕರವಾದ ಅನುಬಂಧಗಳನ್ನು ಉಳಿಸಿ ಬೆಳೆಸುವ ಹಿಟ್ಟಿನಲ್ಲಿ ಸಾಹಿತ್ಯ ಎನ್ನುವುದು ಉತ್ತರವಾಗಿ ಉಳಿದುಕೊಳ್ಳಬೇಕಿದೆ. ಬಹುಶಃ ವಿಜ್ಞಾನದ ಆವಿಷ್ಕಾರವಾಗಿ ಇದು ಅವಶ್ಯಕತೆ ಇರುವ ಸಂದರ್ಭದಲ್ಲಿ ಹೇಗೆ ಪ್ರಮುಖರನ್ನು ಬಳಸಲಾಯಿತು ಹಾಗೆ ಬಳಸುವುದು ಅಷ್ಟೇ. ಈಗಲೂ ಕಂಪ್ಯೂಟರ್ನಲ್ಲಿ ನಾವು ಕನ್ನಡ ಸಾಹಿತ್ಯದ ಬೆಳವಣಿಗೆಯ ರೂಪವಾದ ಅಕ್ಷರ ಜೋಡಿ ಹಣೆಯ ಕಾರ್ಯವನ್ನು ಮಾಡಬಹುದೇ ಹೊರತು ಹೊಸ ಸೃಷ್ಟಿಯನ್ನು ಪರಿಕಲ್ಪಿಸುವುದಕ್ಕೂ ಸಾಧ್ಯವಿಲ್ಲ. ಅದು ಮತ್ತೊಮ್ಮೆ ನಮ್ಮ ಸೃಷ್ಟಿಯೇ ಆಗಿರುತ್ತದೆ. ಕೃತಕ ಬುದ್ಧಿಮತ್ತೆಯಲ್ಲಿ ಸಾಹಿತ್ಯವನ್ನು ಕೇಳಿಸಬಹುದೇ ಹೊರತು ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸುವುದು ಸಾಧ್ಯವಿಲ್ಲ.

**ಪರಾಮರ್ಶನ ಗ್ರಂಥಗಳು**


- Adeep Hande, Priyadharshini, R., Sampath, A., et al. (2021). *Hope speech detection in under-resourced Kannada language*. arxiv. https://arxiv.org/abs/2108.04616

- Bender, E. M., Gebru, T., McMillan-Major, A., & Shmitchell, S. (2021). *On the dangers of stochastic parrots: Can language models be too big?* Proceedings of the 2021 ACM Conference on Fairness, Accountability, and Transparency, 610–623. https://doi.org/10.1145/3442188.3445922
- Bird, S., Klein, E., & Loper, E. (2009). *Natural language processing with Python*. O'Reilly Media.
- Dixit, V. V. (2022). *Kannudi: A reference editor for Kannada*. arXiv. https://arxiv.org/abs/2301.00836
- Goodfellow, I., Bengio, Y., & Courville, A. (2016). *Deep learning*. MIT Press.
- Indira, K., & Sethu Selvi, S. (2010). *Kannada character recognition system: A review*. arXiv. https://arxiv.org/abs/1001.5352
- Jurafsky, D., & Martin, J. H. (2025). *Speech and language processing* (3rd ed., draft). Pearson.
- Kumar, H. R. S., & Ramakrishnan, A. G. (2019). *Lipi Gnani: A versatile OCR for documents in any language printed in Kannada script*. arXiv. https://arxiv.org/abs/1901.00413
- Russell, S., & Norvig, P. (2021). *Artificial intelligence: A modern approach* (4th ed.). Pearson.
- UNESCO. (2021). *Recommendation on the ethics of artificial intelligence*. UNESCO.